ಕ್ರ. ಸಂ.	ವರ್ಷ	ಸ್ವೀಕರಿಸಿದ ಅರ್ಜಿಗಳು	ಹಂಚಿಕೆ ಮಾಡಲಾದ ಮನೆಗಳು	ಉಳಿದಿರುವ ಅರ್ಜಿಗಳು
1.	1994-95	2047	803	1244
2.	1995-96	5019	2027	2992
3.	1996-97	5990	1920	4070
	ಒಟ್ಟು	13056	4750	8306

ಇ) ಸುಮಾರು ಆರು ತಿಂಗಳಿನೊಳಗೆ 4280 ಅರ್ಜಿದಾರರಿಗೆ ಮನೆಗಳನ್ನು ಒದಗಿಸಲಾಗುವುದು.

ರಾಜ್ಯದಲ್ಲಿ ನಿವೇಶನಗಳ ಹಂಚಿಕೆ

134 (195) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ನಿವೇಶನ ರಹಿತದಿಂದ ನಿವೇಶನ ಬಯಸಿ ಬಂದ ಅರ್ಜಿಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಅವುಗಳಲ್ಲಿ ಎಷ್ಟು ಅರ್ಜಿದಾರರಿಗೆ ನಿವೇಶನಗಳನ್ನು ಹಂಚಲಾಗಿದೆ?

ಇ) ಉಳಿದ ಅರ್ಜಿದಾರರುಗಳಿಗೆ ಎಷ್ಟು ಅವಧಿಯೊಳಗೆ ನಿವೇಶನ ಹಂಚಲು ಸರ್ಕಾರದವರು ಕ್ರಮ ಕೈಗೊಳ್ಳುವರು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಮಾರ್ಚ್ 1995ರ ಸರ್ವೇಕ್ಷಣೆ ಪ್ರಕಾರ ರಾಜ್ಯದಲ್ಲಿ ಒಟ್ಟು 11,52,188 ಜನ ನಿವೇಶನ ರಹಿತರು ಹಾಗೂ 7,81,816 ಜನ ವಸತಿ ರಹಿತರು ಹೀಗೆ ಒಟ್ಟು 19,34,004 ಜನ ನಿವೇಶನ ಮತ್ತು ವಸತಿ ರಹಿತರು ಇರುತ್ತಾರೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಆಶ್ರಯ ಯೋಜನೆಯಡಿ ನಿವೇಶನ ಹಾಗೂ ವಸತಿಗಾಗಿ ನಿವೇಶನ ರಹಿತರಿಂದ ಅಥವಾ ವಸತಿ ರಹಿತರಿಗೆ ಈ ಕೆಳಕಂಡಂತೆ ನಿವೇಶನಗಳನ್ನು ಮತ್ತು ಮನೆಗಳನ್ನು ಹಂಚಲಾಗಿದೆ.

	ನಿವೇಶನಗಳು		ಮನೆಗಳು	
	ಗ್ರಾಮೀಣ	ನಗರ	ಗ್ರಾಮೀಣ	ನಗರ
1195-96	32808	13866	53512	3489
1996-97	83693	17755	16788	-
1997-98	23973	2866	988	-
ಒಟ್ಟು	140 474	34 487	71 288	3,489

೫) ಮುಂದಿನ 9 ಮತ್ತು 10ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹಂತ ಹಂತವಾಗಿ ನಿವೇಶನಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-1

ರಾಜ್ಯದಲ್ಲಿ ನಿವೇಶನ ರಹಿತರು ಮತ್ತು ವಸತಿ ರಹಿತರು

(ಮಾರ್ಚ್ 1995ರ ಸರ್ವೇಕ್ಷಣೆಯಂತೆ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿವೇಶನ ರಹಿತರು	ವಸತಿ ರಹಿತರು	ಒಟ್ಟು
1.	ಬೆಂಗಳೂರು (ಗ್ರಾ)	64267	43300	107567
2.	ಬೆಂಗಳೂರು (ನಗರ)	56894	50560	107454
3.	ಚಿತ್ರದುರ್ಗ	83025	41382	124407
4.	ಕೋಲಾರ	42834	68735	111569
5.	ಶಿವಮೊಗ್ಗ	68299	26157	94456
6.	ತುಮಕೂರು	70830	55273	119041
7.	ಮೈಸೂರು	75000	55273	130273
8.	ಚಿಕ್ಕಮಗಳೂರು	17721	41369	59090
9.	ದಕ್ಷಿಣ ಕನ್ನಡ	41895	36665	78560
10.	ಹಾಸನ	45713	30906	76619
11.	ಕೊಡಗು	18965	18965	37930
12.	ಮಂಡ್ಯ	62824	40281	103105

1	2	3	4	5
13.	ಬೆಳಗಾಂ	73535	35607	109142
14.	ಬಿಜಾಪುರ	96463	23658	120121
15.	ಧಾರವಾಡ	100127	41742	141869
16.	ಉತ್ತರ ಕನ್ನಡ	23326	23147	46473
17.	ಗುಲ್ಬರ್ಗಾ	69371	35036	104407
18.	ಬೀದರ್	33040	17950	50990
19.	ಬಳ್ಳಾರಿ	80993	38096	119089
20.	ರಾಯಚೂರು	27066	64776	91842
	ಒಟ್ಟು	1152188	781816	1934004

ಕೋರಮಂಗಲದಲ್ಲಿ ನಿರ್ಮಿಸಲಾಗಿರುವ ಕರ್ನಾಟಕ ಗೃಹ ಮಂಡಳಿಯ ವಸತಿ ಗೃಹಗಳು

135 (97) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ವಸತಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹಮಂಡಳಿಯು ಕೋರಮಂಗಲದಲ್ಲಿ ಎಷ್ಟು ಪ್ಲಾಟ್‌ಗಳನ್ನು ನಿರ್ಮಿಸಿದೆ, ಇದರಲ್ಲಿ 2 ಮತ್ತು 3 ಹಾಸಿಗೆಯ ಪ್ಲಾಟ್‌ಗಳು ಎಷ್ಟು, ಒಂದನೇ ಹಂತದಲ್ಲಿ ನಿರ್ಮಿಸಿದ ಸಂಖ್ಯೆ ಎಷ್ಟು, ಎರಡನೇ ಹಂತದಲ್ಲಿ ನಿರ್ಮಿಸಿದ ಸಂಖ್ಯೆ ಎಷ್ಟು;

ಆ) ಇದಕ್ಕಾಗಿ ಒಟ್ಟು ಖರ್ಚಾಗಿರುವ ಹಣವೆಷ್ಟು;

ಇ) ಈ ಯೋಜನೆಗೆ ಸಾಲ ರೂಪವಾಗಿ ಪಡೆದಿರುವ ಹಣವೆಷ್ಟು ಮತ್ತು ಯಾವ ಯಾವ ಸಂಸ್ಥೆಗಳಿಂದ ಸಾಲವನ್ನು ಪಡೆಯಲಾಗಿದೆ.

ಈ) ದಿನಾಂಕ:31-12-97 ರವರೆಗೆ ಈ ಸಾಲಕ್ಕಾಗಿ ಪಾವತಿ ಮಾಡಿರುವ ಬಡ್ಡಿಯ ಹಣ ಎಷ್ಟು (ಯಾವ ಯಾವ ಸಂಸ್ಥೆಗೆ ಎಷ್ಟೆಷ್ಟು ಎಂಬ ವಿವರ ನೀಡುವುದು;

ಉ) ದಿನಾಂಕ:31-12-97 ರವರೆಗೆ ಒಟ್ಟು ಎಷ್ಟು ಪ್ಲಾಟ್‌ಗಳನ್ನು ಮಾರಾಟ ಮಾಡಲಾಯಿತು, ಯಾವ ಯಾವ ಸಂಸ್ಥೆಗಳಿಗೆ ಮಾರಾಟ ಮಾಡಲಾಗಿದೆ, ಬಾಕಿ ಉಳಿದಿರುವ ಪ್ಲಾಟ್ ಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಕರ್ನಾಟಕ ಗೃಹ ಮಂಡಳಿಯು ಕೋರಮಂಗಲದಲ್ಲಿ ಒಟ್ಟು 2534 ಪ್ಲಾಟ್‌ಗಳನ್ನು ನಿರ್ಮಿಸಿದೆ.